**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು. ದಿಃ 12.10.2022.**

**ಪಾಟೀಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಕೆ ಎನ್ ಎಸ್ ವಕೀಲರಿಂದಃ**

3. ನಾನು ವಾದಿ ಸಂಘದ ಅಜೀವ ಸದಸ್ಯನಾಗಿರುತ್ತೇನೆ. ನಾನು ವಾದಿ ಸಂಘದ ಅಜೀವ ಸದಸ್ಯ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುತ್ತದೇಯಾ ಎಂದರೆ ಸದರಿ ದಾಖಲೆಯು ವಾದಿ ಸಂಘದಲ್ಲಿ ಇರುತ್ತದೆ. ನಾನು ವಾದಿ ಸಂಘದ ಉಪಾಧ್ಯಕ್ಷ ಆಗಿದ್ದೆ ಎಂದು ತೋರಿಸಲು ಸಂಘದಲ್ಲಿ ದಾಖಲೆಗಳು ಇರುತ್ತವೆ. 1 ನೇ ಪ್ರತಿವಾದಿಯವರು ವಾದಿ ಸಂಘದ ಖಾಯಂ ಅಧ್ಯಕ್ಷರು ಎಂದರೆ 1981-82 ರ ನಡವಳಿ ಪ್ರಕಾರ 1 ನೇ ಪ್ರತಿವಾದಿ ಖಾಯಂ ಅಧ್ಯಕ್ಷರಾಗಿರುತ್ತಾರೆ. ನಾವು ಸಂಘಕ್ಕೆ ಸದಸ್ಯತನ ಫೀಸ್ ಅನ್ನು ನೀಡಿದರೆ ಸಂಘವು ರಶೀದಿಯನ್ನು ನೀಡುತ್ತದೆ ಎಂದರೆ ನಿಜ. ನಾನು ವಾದಿ ಸಂಘಕ್ಕೆ ಧನ ಸಹಾಯ ಮಾಡಿದ ಬಗ್ಗೆ ದಾಖಲೆಗಳು ವಾದಿ ಸಂಘದಲ್ಲಿ ಇರುತ್ತವೆ.

4. 16 ನೇ ಪ್ರತಿವಾದಿಯವರು ವಾದಿ ಸಂಘದ ಬಗ್ಗೆ ತನಿಖೆ ಮಾಡಿ ವರದಿಯನ್ನು ನೀಡಿರುತ್ತಾರೆ ಎಂದರೆ ನಿಜ. ಸದರಿ ವರದಿಯ ಆಧಾರದ ಮೇಲೆ ಜಿಲ್ಲಾ ನೋಂದಣಾಧಿಕಾರಿಗಳು ಆದೇಶ ಮಾಡಿರುತ್ತಾರೆ ಎಂದರೆ ನಿಜ. ಸದರಿ ಜಿಲ್ಲಾ ನೋಂದಣಾಧಿಕಾರಿಗಳು ಮಾಡಿದ ಆದೇಶದ ಮೇಲೆ ಈ ವ್ಯಾಜ್ಯವನ್ನು ದಾಖಲು ಮಾಡಿರುತ್ತೇನೆ ಎಂದರೆ ನಿಜ. 16 ನೇ ಪ್ರತಿವಾದಿ ನೀಡಿದ ವರದಿ ರದ್ದಪಡಿಸಬೇಕು ಎಂದು ಸಹ ಈ ವ್ಯಾಜ್ಯ ಸಲ್ಲಿಸಿರುತ್ತೇನೆ ಎಂದರೆ ನಿಜ. ಜಿಲ್ಲಾ ನೋಂದಾವಣಾಧಿಕಾರಿಗಳು ಮಾಡಿದ ಆದೇಶದ ಮೇರೆಗೆ ವಾದಿ ಸಂಘದಲ್ಲಿ ಚುನಾವಣೆಯಾಗಿರುತ್ತದೆ ಎಂದರೆ ಸುಳ್ಳು. 2015-16 ರಲ್ಲಿ ವಾದಿ ಸಂಘಕ್ಕೆ ಚುನಾವಣೆ ನಡೆದು ಸಂಘಕ್ಕೆ ಹೊಸ ಪದಾಧಿಕಾರಿಗಳು ನೇಮಕವಾಗಿರುತ್ತಾರೆ ಎಂದರೆ ಚುನಾವಣೆ ನಡೆದಿರುವುದಿಲ್ಲ.

5. 16 ನೇ ಪ್ರತಿವಾದಿಯ ವರದಿ ಹಾಗೂ ಜಿಲ್ಲಾ ನೋಂದಣಾಧಿಕಾರಿಯವರ ಆದೇಶವನ್ನು ಈ ವ್ಯಜ್ಯದಲ್ಲಿ ಅಲ್ಲದೇ ಬೇರೆ ಎಲ್ಲೂ ಪ್ರಶ್ನಿಸಿರುವುದಿಲ್ಲ ಎಂದರೆ ನಿಜ. ನಿಪಿ2 ರಂತೆ ಮಾನ್ಯ ಉಚ್ಚ ನ್ಯಾಯಾಲಯವು ನಾವು ಸಲ್ಲಿಸಿದ ರಿಟ್ ಅರ್ಜಿಯನ್ನು ವಜಾ ಮಾಡಿರುತ್ತದೆ ಎಂದರೆ ಮಾನ್ಯ ನ್ಯಾಯಾಲಯವು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಆದೇಶ ಮಾಡಿರುತ್ತದೆ. ನಿಪಿ 3 ಮತ್ತು 4 ದಾಖಲೆಗಳು 2015-16 ರಲ್ಲಿ ವಾದಿ ಸಂಘದಲ್ಲಿ ಆದ ಚುನಾವಣೆಯಲ್ಲಿ ನೇಮಕಗೊಂಡ ಪದಾಧಿಕಾರಿಗಳ ವಿವರಣೆ ಹಾಗೂ ಜನರಲ್ ಬಾಡಿ ಪ್ರೊಸೀಡಿಂಗ್ ಆಗಿರುತ್ತದೆ ಎಂದರೆ ಸದರಿ ದಾಖಲೆಗಳು ಜಿಲ್ಲಾ ನೋಂದಾವಣಾಧಿಕಾರಿಗಳಿಗೆ ಸಲ್ಲಿಸಿದ ದಾಖಲೆಗಳಾಗಿದ್ದು, ಸದರಿ ಅಧಿಕಾರಿಗಳಿಂದ ಈ ನ್ಯಾಯಾಲಯದಲ್ಲಿ ವ್ಯಾಜ್ಯ ಸಲ್ಲಿಸುವ ಕಾರಣಕ್ಕೆ ಪಡೆದು ಸಲ್ಲಿಸಿದ ದಾಖಲೆಗಳಾಗಿರುತ್ತವೆ.

6. ವಾದಿ ಸಂಘಕ್ಕೆ 2015-16 ರಲ್ಲಿ ಚುನಾವಣೆ ನಡೆದು 14 ಮಂದಿ ಪದಾಧಿಕಾರಿಗಳು ಅವಿರೋದವಾಗಿ ಆಯ್ಕೆಯಾಗಿರುತ್ತಾರೆ ಎಂದರೆ ಚುನಾವಣೆ ನಡೆದಿರುವುದಿಲ್ಲ. ನಾನು ವಾದಿ ಸಂಘದ ಸದಸ್ಯನಾಗಿರದ ಕಾರಣ ನಾನು ವಾದಿ ಸಂಘಕ್ಕೆ ಹೋಗಿರುವುದಿಲ್ಲ

ಹಾಗೂ ವಾದಿ ಸಂಘದ ವಿಚಾರ ಗೊತ್ತಿರುವುದಿಲ್ಲ ಎಂದರೆ ಸುಳ್ಳು. ವಾದಿ ಸಂಘದ ಹಿಂದಿನ ಸ್ವಾಮಿಗಳಾದ ಚೆನ್ನವೀರ ಸ್ವಾಮಿಗಳು 1 ನೇ ಪ್ರತಿವಾದಿಗಳಿಗೆ ಪತ್ರ ಬರೆದು ನಾನು ವಾದಿ ಸಂಘದಲ್ಲಿ ಸುಮಾರು ರೂ.20,000/- ದಷ್ಟು ಅವ್ಯವಹಾರ ಮಾಡಿರುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸುಳ್ಳು. ನಾನು ದಿನಾಂಕ 11.05.2005 ರಲ್ಲಿ ವಾದಿ ಸಂಘಕ್ಕೆ ಅರ್ಜಿ ಸಲ್ಲಿಸಿ ನನ್ನ ಸಂಘದ ಸದಸ್ಯಕ್ಕೆ ರಾಜಿನಾಮೆ ಕೊಡುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಇರಬಹುದು. ನಾನು ಸದರಿ ರಾಜಿನಾಮೆ ನೀಡಿದ ನಂತರ ವಾದಿ ಸಂಘದ ಸದಸ್ಯನಾಗಿರುವುದಿಲ್ಲ ಎಂದರೆ ಸುಳ್ಳು.

7. 2 ನೇ ವಾದಿಗಳು ವಾದಿ ಸಂಘದ ಸದಸ್ಯರಾಗಿ ಮುಂದುವರೆದಿರುವುದಿಲ್ಲ ಎಂದರೆ ಸುಳ್ಳು. ವಾದಿ ಸಂಘದಲ್ಲಿ ಎಷ್ಟು ಜನ ಅಜೀವ ಸದಸ್ಯರು ಹಾಗೂ ಎಷ್ಟು ಜನ ಸಾಮಾನ್ಯ ಸದಸ್ಯರು ಇದ್ದಾರೆ ಎಂದರೆ ಒಟ್ಟು 51 ಜನ ಸದಸ್ಯರು ಇರುತ್ತಾರೆ. 1 ನೇ ಪ್ರತಿವಾದಿಗಳು ವಾದಿ ಸಂಘದ ಅಧ್ಯಕ್ಷರಾದ ನಂತರ ಪ್ರತಿ ವರ್ಷದ ಲೆಕ್ಕ ಪತ್ರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಸಂಘದ ಬಗ್ಗೆ 16 ನೇ ಪ್ರತಿವಾದಿ ವಿಚಾರಣೆ ಮಾಡಿದಾಗ ನನ್ನನ್ನು ಸಹ ವಿಚಾರಣೆ ಮಾಡಿರುತ್ತಾರೆ ಎಂದರೆ ನಿಜ. 2 ರಿಂದ 15 ನೇ ಪ್ರತಿವಾದಿಗಳು ವಾದಿ ಸಂಘದ ಸದಸ್ಯರಲ್ಲ ಎಂದರೆ ನಿಜ. 1 ರಿಂದ 14 ನೇ ವಾದಿಗಳು ವಾದಿ ಸಂಘದ ಸದಸ್ಯರುಗಳು ಆಗಿರುವುದಿಲ್ಲ ಎಂದರೆ ಸುಳ್ಳು. 2 ರಿಂದ 14 ವಾದಿಗಳು ಹಾಗೂ 2 ರಿಂದ 15 ನೇ ಪ್ರತಿವಾದಿಗಳು ನನ್ನೊಂದಿಗೆ ಚೆನ್ನಾಗಿ ಇರುತ್ತಾರೆ ಎಂದರೆ ನನಗೆ ಹೇಳಲಾಗುವುದಿಲ್ಲ.

8. ನಾನು ವಾದಿ ಸಂಘದ ಸದಸ್ಯನಲ್ಲ ಎಂದರೆ ಸುಳ್ಳು. ನನಗೆ ವಾದಿ ಸಂಘದ ಪರವಾಗಿ ವ್ಯಾಜ್ಯ ಸಲ್ಲಿಸಲು ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು. ನಾನು ವ್ಯಾಜ್ಯ ಹಾಗೂ ಬೇರೆ ಬೇರೆ ಅರ್ಜಿ ಸಲ್ಲಿಸಿದ ಕಾರಣ ವಾದಿ ಸಂಘಕ್ಕೆ ಬರುವ ಸರ್ಕಾರದ ಸವಲತ್ತುಗಳು ನಿಂತು ಹೋಗಿರುತ್ತವೆ ಎಂದರೆ ನಾನು ಯಾವುದೇ ಅರ್ಜಿ ಬರೆದಿರುವುದಿಲ್ಲ. ನಾನು ಅನೇಕ ಅರ್ಜಿಗಳನ್ನು ಬರೆದ ಕಾರಣ ವಾದಿ ಸಂಘ ನಡೆಸುತ್ತಿದ್ದ ಅನಾಥ ಮಕ್ಕಳ ಆಶ್ರಮಕ್ಕೆ ಸರ್ಕಾರದಿಂದ ಬರುವ ಅನುದಾನವು ರದ್ದಾಗಿರುತ್ತದೆ ಎಂದರೆ ಸುಳ್ಳು. ವಾದಿ ಸಂಘಕ್ಕೆ ನನ್ನನ್ನು ಸದಸ್ಯರನ್ನಾಗಿ ತೆಗೆದುಕೊಳ್ಳದೇ

ಇರುವ ಉದ್ದೇಶದಿಂದ ನಾನು ಸುಳ್ಳು ವ್ಯಾಜ್ಯವನ್ನು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು.

**(ಉಳಿದ ಪ್ರತಿವಾದಿಗಳು ಗೈರು ಹಾಜರಿದ್ದ ಕಾರಣ ಉಳಿದ ಪ್ರತಿವಾದಿಗಳ ಪರ ಪಾಟೀಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).**

**ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿವಿಲ್ ನ್ಯಾ. ಮತ್ತು ಜೆ ಎಂ ಎಫ್ ಸಿಃ ಸೊರಬ**